ಅಳಿದಾಗಲೇ 'ಏಕಗೋಪಿ ಏಕಶ್ಯಾಮ್' ಎಂಬ ತನ್ಮಯತೆಯು ಮೂಡುತ್ತದೆ.

ಲಾಲಿತ್ಯದ ಹೆಜ್ಜೆಗಾರಿಕೆಯೊಂದಿಗೆ ವೃತ್ತಾಕಾರದ ಚಲನೆಗಳೇ ಮಣಿಪುರಿ ನೃತ್ಯದ ಪ್ರಧಾನ ಅಂಶ. ನೃತ್ಯವು ಸಮುದ್ರದ ಅಲೆಗಳಂತೆ ತೇಲಿ ತೇಲಿ ಬರುವಂತಿರಬೇಕು. ಲಾಸ್ಯಪ್ರಧಾನವಾಗಿದ್ದರೂ ಆಕರ್ಷಕವಾಗಿ ಗಂಭೀರವಾಗಿರಬೇಕು. ಇತರ ನೃತ್ಯಗಳಂತೆ ಇಲ್ಲಿ ಕಲಾವಿದರು ಪ್ರೇಕ್ಷಕರತ್ತ ದೃಷ್ಟಿನೆಟ್ಟು ಹೆಜ್ಜೆಹಾಕುವುದಿಲ್ಲ. ದೃಷ್ಟಿಯು ಅಧೋಮುಖಿಯಾಗಿದ್ದುಕೊಂಡು ಶರಣಾಗತಿಯ ಭಾವವೇ ಪ್ರಧಾನವಾಗಿದ್ದುಕೊಂಡು ಇಲ್ಲಿ ಪ್ರಸ್ತುತಿಗಳು ನಡೆಯುತ್ತವೆ.

**◆ ನೀವು ಮೊತ್ತ ಮೊದಲು ಗೋವಿಂದಜೀ ದೇವಾಲಯದಲ್ಲಿ ನೃತ್ಯಸೇವೆ ಅರ್ಪಿಸಿದಿರಿ. ಅಂದಿನ ಅನುಭವಗಳನ್ನು ಹೇಳುವಿರಾ?**

ಆ ದಿನವೇ? ನನಗೆ ನೆನಪಿದೆ... ಓಹ್... (ಕಣ್ಣೀರು) ಕೆಲವೊಮ್ಮೆ ಅನಿಸುತ್ತದೆ ಅಂದು ಏನಾಯಿತೋ ಗೊತ್ತಿಲ್ಲ. ಹಾಗೆ ನೃತ್ಯ ಮಾಡುತ್ತ ಆತ್ಮವನ್ನು ಶುದ್ಧ ಮಾಡಿಕೊಳ್ಳುವುದೆಂದರೆ ಅದಕ್ಕೆ ಯೋಗ ಬೇಕೇನೋ. ಅವತ್ತು ಗುರೂಜಿಯೇ ಮೃದಂಗದಲ್ಲಿ ಇದ್ದರು. ಮಣಿಪುರದ ರಾಜಮಾತೆ, ಆರು ವರ್ಷ ವಯಸ್ಸಿನ ರಾಜ ಕುಳಿತಿದ್ದ ನೆನಪು. ಅಲ್ಲಿ ಯಾರು ಕುಳಿತಿದ್ದರು, ನಾನು ಏನು ನರ್ತಿಸಿದೆ ಎಂಬ ವಿವರಗಳನ್ನೆಲ್ಲ ಈಗ ಮರೆತಿದ್ದೇನೆ. ಸಾಂಪ್ರದಾಯಿಕ ಭಂಗಿಪರೇನ್ ಪ್ರಸ್ತುತಿ, ಗುರೂಜಿ ನಿರ್ದೇಶನದ ಕೆಲವು ನೃತ್ಯಗಳನ್ನು ನಾವು ನಾಲ್ವರು ಅಲ್ಲಿ ಮಾಡಿದ್ದೆವು. ಅಂದು ಅಲ್ಲಿ ನರ್ತಿಸಿದ ಬಳಿಕ ಇಂದಿನವರೆಗೆ ನಾನು ನೃತ್ಯವನ್ನು ನಿಲ್ಲಿಸಿದ್ದೇ ಇಲ್ಲ. ಆ ಸಮರ್ಪಣೆಯ ಕ್ಷಣಗಳನ್ನು ನೆನಪಿಸಿದಾಗ ಇಂದಿಗೂ ನನ್ನ ಕಣ್ಣಲ್ಲಿ ನೀರು ತುಂಬುತ್ತದೆ. ಅಂದು ದೇವರು ನನಗೆ ಆಶೀರ್ವದಿಸಿದರು. ನಾನು ವಿನೀತಳಾಗಿ ಈ ಕೆಲಸಗಳನ್ನು ಮಾಡಲು ಶಕ್ತಿ ಕೊಟ್ಟರು. ನನ್ನ ಎಲ್ಲ ಕೆಲಸ ಕಾರ್ಯಗಳನ್ನೂ ಗೋವಿಂದಜೀಗೆ ಅರ್ಪಿಸಿಯೇ ಮುಂದುವರೆಯುವೆ ನಾನು. ಇಂದಿಗೂ ಶ್ರೀ ಗೋವಿಂದಜೀ ದೇವಸ್ಥಾನಕ್ಕೆ ತೆರಳುವುದು ವಾಡಿಕೆ.

**◆ ಭಕ್ತಿ ರಸವಿಲ್ಲದೇ ಮಣಿಪುರಿ ನೃತ್ಯ ಕಲಿಯುವುದು ಸಾಧ್ಯವಿಲ್ಲವೆ?**

ನಗರಗಳಲ್ಲಿ ವಾಸಿಸುವ ನಾವು ಭಕ್ತಿರಸವನ್ನು ಎಲ್ಲಿಂದ ತರೋಣ. ಮಣಿಪುರದಲ್ಲಿ ಈ ಭಕ್ತಿಯ ವಾತಾವರಣ ಇರುವುದರಿಂದ ಅದು ಸಾಧ್ಯವಾಗಬಹುದು. ಆದರೆ, ಯಾವಾಗ ಈ ನೃತ್ಯ ಪ್ರಕಾರವು ಸೀಮಿತ ಪ್ರದೇಶವನ್ನು ದಾಟಿ ದೇಶ ಮತ್ತು ವಿದೇಶಗಳಲ್ಲಿ ಪ್ರಸಿದ್ಧಿ ಪಡೆಯಿತೋ ಆಗ ಭಕ್ತಿಯ ಲೇಪದ ಬದಲಿಗೆ ಜ್ಞಾನದ, ಸಂಕೇತದ ಅಂಶಗಳು ಪ್ರಧಾನವಾಗತೊಡಗಿದವು. ನಾವು ಸಂಗ್ರಹಿಸಿದ ಪಠ್ಯಗಳನ್ನು ಆಧರಿಸಿಕೊಂಡು ಈಗ ವಿಶ್ವವಿದ್ಯಾಲಯಗಳಲ್ಲಿ ಮಣಿಪುರಿ ನೃತ್ಯ ಕಲಿಕೆಯ ಕೋರ್ಸ್‌ಗಳನ್ನು ರೂಪಿಸಲಾಗಿದೆ. ಅದು ಮಣಿಪುರಿ ಪ್ರದೇಶದ ಹೊರಗೆ ಇರುವವರಿಗೂ ಕಲಿಯುವುದಕ್ಕೆ ಅನುಕೂಲವಾಗುವಂತಿದೆ.

ಮಣಿಪುರದಲ್ಲಿ ನೇರವಾಗಿ ರಾಸಲೀಲೆಗೆ ಬೇಕಾದ ನೃತ್ಯಗಳನ್ನು ಗುರುಗಳು ಒಂದಾರು ತಿಂಗಳಿಗೆ ಕಲಿಸುವುದು ವಾಡಿಕೆ. ಆದರೆ, ಸಂಕೀರ್ತನೆ ಮತ್ತು ಪುಂಗ್ ಚಲೋಂನಲ್ಲಿ ಶಿಸ್ತುಬದ್ಧವಾದ ತರಬೇತಿಯನ್ನು ಈಗಲೂ ನೀಡಲಾಗುತ್ತದೆ. ಕೋರ್ಸ್‌ಗಳು ಈ ಕಲಾಪ್ರಕಾರವನ್ನು ಅಧ್ಯಯನ ಮಾಡುವುದಕ್ಕೆ ಬೇಕಾದ ರೀತಿಯಲ್ಲಿ ರೂಪುಗೊಂಡಿವೆ. ಮಣಿಪುರಿಯಲ್ಲಿ, ಭಕ್ತಿರಸದಲ್ಲಿ 64 ಪ್ರಕಾರಗಳಿವೆ. ಗೌಡಿಯಾ ವೈಷ್ಣವ ಪಂಥದಲ್ಲಿ ಭಕ್ತಿರಸವೇ ಪ್ರಧಾನವಾಗಿದ್ದು, ಇಲ್ಲಿ ಕೃಷ್ಣ ಪ್ರತಿರತಿಯೇ ಸ್ಥಾಯೀಭಾವವಾಗಿರುತ್ತದೆ. ಆದ್ದರಿಂದ ಭಕ್ತಿರಸಲ್ಲಿ ಐದು ಪ್ರಾಥಮಿಕ ಭಾವಗಳಾದ ವಾತ್ಸಲ್ಯ, ಸಖ್ಯ, ದಾಸ್ಯ, ಮಧುರ ಮತ್ತು ಶಾಂತರಸಗಳು ಆದ್ಯತೆ ಪಡೆಯುತ್ತವೆ. ಇನ್ನುಳಿದ ಏಳು ಭಾವಗಳು- ಹಾಸ್ಯ, ಕರುಣಾ, ಭೀಭತ್ಸ, ಭಯ, ರೌದ್ರ, ವೀರ, ಅದ್ಭುತ- ಗೌಣಗುಣಗಳು. ಇಡೀ ಮಣಿಪುರಿ ಪ್ರಕಾರವೇ ಕೃಷ್ಣನಿಗೆ ಶರಣಾಗಿಯೇ ಮುನ್ನಡೆಯುತ್ತಿದೆ ಎಂದರೆ ಸರಿ. ಇದನ್ನು ಕಾಲೇಜಿನಲ್ಲಿ ಈಗಿನ ವಿದ್ಯಾರ್ಥಿಗಳಿಗೆ ತಿಳಿಹೇಳುವುದು ಸುಲಭವೇನಲ್ಲ. ಈ ಜ್ಞಾನಶಾಖೆಯನ್ನು ಪಠ್ಯರೂಪವಾಗಿ ಸಿದ್ಧಪಡಿಸುವಾಗ, ಅವರ ಮನಸ್ಸನ್ನು ಹಂತಹಂತವಾಗಿ ಸಿದ್ಧಪಡಿಸಲು ಪೂರಕ ರೀತಿಯಲ್ಲಿ ಕಲಿಕೆಯನ್ನು ವಿನ್ಯಾಸಗೊಳಿಸಲಾಗಿದೆ. ಪ್ರಸ್ತುತ ನಾಲ್ಕು ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿಯಲ್ಲಿ ನಾನು ಸದಸ್ಯೆಯಾಗಿರುವೆ. ಅಲ್ಲಿ ಮಣಿಪುರಿ